ಮಲ್ಲಿಗೆ, ಜಾಜಿಗಳ ನವಿರಾದ ಪರಿಮಳ ಎಲ್ಲವೂ ಸೇರಿ ರಾಜಕುಮಾರನನ್ನು ತೊಟ್ಟಿಲೊಳಗಿಟ್ಟು ಲಾಲಿ ಹಾಡಿ ಮಲಗಿಸಿದಂತಾಯಿತು. ಯಾವಾಗ ನಿದ್ರೆ ಬಂದು ತಬ್ಬಿತೋ ಅವನಿಗೇ ತಿಳಿಯದು.

ಅಂದು ರಾತ್ರಿ ರಾಜಕುಮಾರಿ ಬಂದವಳು ತೋಟದಲ್ಲಿ ಯಾರೋ ಮಲಗಿರುವುದನ್ನು ಕಂಡು ಬೆಚ್ಚಿಬಿದ್ದಳು. ಸ್ವಲ್ಪ ಹೊತ್ತು ಕಾದು ನೋಡಿ, ಕುತೂಹಲ ತಡೆಯದೆ ಮೆಲ್ಲಗೆ ಬಂದು ಮರೆಯಾಗಿ ನಿಂತು ನೋಡಿದಳು. ರಾಜಕುಮಾರ ಗಾಢನಿದ್ದೆಯಲ್ಲಿದ್ದ. ತನ್ನ ಕೆಲಸವನ್ನು ಬೇಗ ಮುಗಿಸಿಕೊಂಡು ಅವನ ಸುಂದರಾಕಾರವನ್ನು ನೋಡಿದಷ್ಟು ತಣಿಯದೆ ಮನಸ್ಸಿಲ್ಲದ ಮನಸ್ಸಿನಿಂದ ವಾಪಸ್ಸಾದಳು.

ಬೆಳಿಗ್ಗೆ ಎಚ್ಚೆತ್ತ ರಾಜಕುಮಾರನಿಗೆ ನಾಚಿಕೆಯಾಯಿತು. ಛೇ ನಿದ್ದೆ ತಡೆಯಲಾರದೆ ಹೋದೆನಲ್ಲ ಎಂಥ ಕೆಲಸವಾಯಿತು ಎಂದು ಕೊಂಡವನಿಗೆ ಅಂದೂ ಹೂವು ಹಣ್ಣು ಕಳುವಾಗಿರುವುದು ಗಮನಕ್ಕೆ ಬಂದಿತು. ಯಾರೋ ಪಕ್ಕಾ ಕಳ್ಳರು ಇವರನ್ನು ಹಿಡಿಯಲೇಬೇಕು ಎಂದುಕೊಂಡು ಅಂದು ರಾತ್ರಿ ಒಂದು ಉಪಾಯ ಮಾಡಿದನು. ಚಾಕುವಿನಿಂದ ತನ್ನ ಒಂದು ಬೆರಳನ್ನು ಗೀರಿಕೊಂಡು ಅದಕ್ಕೆ ಉಪ್ಪು ತುಂಬಿದ ಅರ್ಧ ಲಿಂಬೆಹೋಳನ್ನು ಗಾಯದ ಮೇಲೆ ಇಟ್ಟುಕೊಂಡು, ನಿದ್ರೆ ಬಂದವನಂತೆ ಅರ್ಧ ಕಣ್ಣು ಮುಚ್ಚಿ ಅಲುಗಾಡದೆ ಮಲಗಿದನು. ಚುಟುಚುಟು ಉರಿಗೆ ನಿದ್ರೆ ಬಾರದೆ ಎಚ್ಚರವಾಗಿಯೇ ಇದ್ದ. ಸರಿರಾತ್ರಿಯ ನಿಶ್ಯಬ್ದತೆಯಲ್ಲಿ ರಾಜಕುಮಾರಿ ಈಚೆಗೆ ಬಂದಳು. ರಾಜಕುಮಾರ ಅಲ್ಲಾಡದೆ ಮಲಗಿರುವುದನ್ನು ಕಂಡು ನಕ್ಕು ಎಂದಿನಂತೆ ಕೊಳದಲ್ಲಿ ಮುಖ ತೊಳೆದು ಹಣ್ಣು ಕಿತ್ತು ತಿಂದು, ಹೂವು ಕಿತ್ತು ಮುಡಿದು ತಿಳಿನೀರಿನಲ್ಲಿ ತನ್ನ ಅಂದ ಚಂದವನ್ನು ನೋಡಿ ಸಂತೋಷಪಟ್ಟು ಇತ್ತ ತಿರುಗಿದಳು.

**ರಾಜಕುಮಾರ 'ಬಾಳೆಗಿಡದ ಚೆಲುವೆ ಬಾಳೆಗಿಡದ ಚೆಲುವೆ ಹಸೆಮಣೆಗೆ ಬಾ' ಎಂದು ಕರೆದ ಕೂಡಲೇ ಬಾಳೆಗಿಡ ಎರಡು ಭಾಗವಾಗಿ ಬಾಯಿಬಿಟ್ಟಿತು. ವಧುವಿನ ಶೃಂಗಾರದಲ್ಲಿ ಒಪ್ಪುತ್ತಿದ್ದ ರಾಜಕುಮಾರಿ ಬಂಗಾರದ ಬಳ್ಳಿಯಂತೆ ಬಳುಕುತ್ತ ನಾಚುತ್ತ ಬಂದು ಹಸೆಮಣೆ ಏರಿದಳು.**

ರಾಜಕುಮಾರ ಇಂದು ಗಾಢನಿದ್ರೆಯಲ್ಲಿರುವಂತೆ ಪವಡಿಸಿದ್ದ. ರಾಜಕುಮಾರಿ ಕುತೂಹಲದಿಂದ ಹತ್ತಿರ, ಹತ್ತಿರ ತನ್ನ ಅರಿವಿಲ್ಲದೆ ಇನ್ನೂ ಹತ್ತಿರ ಹೋಗಿ ಮೆಲ್ಲನೆ ಅವನ ಮುಖದ ಕಡೆಗೆ ಬಾಗಿದಳು. ಅರೆಗಣ್ಣಿನಿಂದ ಎಲ್ಲವನ್ನೂ ಗಮನಿಸುತ್ತಿದ್ದ ರಾಜಕುಮಾರ ಥಕ್ಕನೆ ಅವಳ ಕೈಯನ್ನು ಹಿಡಿದುಬಿಟ್ಟ. 'ಹೇಳು ಸುಂದರಿ ನೀನು ಯಾರು? ಅಪ್ಸರೆಯೋ, ವನದೇವತೆಯೋ ಅಥವಾ ಮೋಹಿನಿಯೋ? ಯಾರು ಹೇಳು' ಎಂದ ಉದ್ವೇಗದಿಂದ.

ರಾಜಕುಮಾರಿ ನಸುನಾಚುತ್ತಾ 'ಕ್ಷಮಿಸಿ, ನಾನು ಅವರ್‍ಯಾರೂ ಅಲ್ಲ. ನಿಮ್ಮಂತೆಯೇ ಮಾನವಳು. ಒಬ್ಬ ದುರದೃಷ್ಟ ರಾಜಕುಮಾರಿ' ಎಂದಳು.

'ನೀನು ಇಲ್ಲಿಗೆ ಹೇಗೆ ಬಂದೆ? ತೋಟದ ಹಣ್ಣು ಕದಿಯುವ ಕಾರಣವೇನು?'

'ನನ್ನದು ಒಂದು ಕತೆ, ಕೇಳುವ ಮನಸ್ಸಿದ್ದರೆ ಹೇಳುತ್ತೇನೆ' ಎಂದಳು.